(ಶ್ರೀ ಎಂ. ವಿ. ಕೃಷ್ಣಪ್ಪ)

ವಿದ್ಯಾವಂತರಿದ್ದಾರೆ. ಥರ್ಡ್ ಫಾರಂ, ಫೋರ್ತ್ ಫಾರಂವರೆಗೆ ಓದಿದ್ದಾರೆ. ಬಹಳ ಕಡಿಮೆ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಅವರು ಹೈದರಾಬಾದ್ ಮತ್ತು ಬೊಂಬಾಯಿ ಕರ್ನಾಟಕದಲ್ಲಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಯಾವರೀತಿ ಆ ಎರಡನ್ನೂ ಒಂದೇ ಮಾಡಬೇಕು ಅನ್ನುವುದನ್ನು ಸರಕಾರ ಪರಿಶೀಲನೆ ಮಾಡಬಾರದೆ ? ಈ ಎಲೇಜ್ ಆಫೀಸರುಗಳು ಸಮರ್ಪಕವಾದ ರೀತಿಯಲ್ಲಿ ಕೆಲಸ ಮಾಡದೆ ಇರುವುದನ್ನು ತಪ್ಪಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಏನೂ ಇಲ್ಲ. ಮಾನ್ಯ ಸದಸ್ಯರಿಗೇ ಗೊತ್ತಿದೆ. ಈಗ ಪಂಚಾಯತಿಗಳ ಉತ್ಪತ್ತಿಯನ್ನೂ ಕೂಡ ಬಹಳ ಜಾಸ್ತಿ ಮಾಡಿದ್ದೇವೆ. ಕಂದಾಯದಲ್ಲಿ ಒಂದು ಭಾಗವನ್ನು ಕೊಡುತ್ತಿದ್ದೇವೆ. ಸಾಮಾನ್ಯ ಉತ್ಪತ್ತಿ ಇರತಕ್ಕ ಪಂಚಾಯತಿಗಳು ಈಗ ಜಾಸ್ತಿ ಯಾಗಿವೆ. ಮನೆಕಂದಾಯವನ್ನು ಲೋಕಲ್‌ಫಂಡಿಗೆ ವಸೂಲು ಮಾಡಲಾಗಿದೆ. ಆದರೂ ಕೆಲವು ಕಡೆಗಳಲ್ಲಿ ಈ ಬಗ್ಗೆ ತೊಂದರೆಯಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಎಫ್. ಎಸ್. ತಾವರೆ.—ಕೆಲವು ಕಡೆಗಳಲ್ಲಿ ಶ್ಯಾನುಭೋಗರ ಮೂಲಕ ರ್ಯಾಂಡ್ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಕೆಲಸ ಮಾಡಿಸುತ್ತ, ಜಮೀನುಗಳನ್ನು ಪರಭಾರೆ ಮಾಡುತ್ತಿದ್ದಾರೆ. ಆದರಿಂದಾಗಿ ಪಂಚಾಯತಿ ಕೆಲಸ ಅವರು ಮಾಡಿಲ್ಲ. ಮನೆ ಕಂದಾಯ ವಸೂಲಿ ಕೆಲಸ ಹಾಗೆಯೇ ಉಳಿದಿದೆ. ಆದ್ದರಿಂದ ಆ ವಿಷಯದಲ್ಲಿ ಸರ್ಕಾರ ಏನು ಕ್ರಮವನ್ನು ತೆಗೆದು ಕೊಳ್ಳುತ್ತದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೊಂಬಾಯಿ ಕರ್ನಾಟಕದಲ್ಲಿ ಆ ರೀತಿ ನಡೆದಿದೆಯೆಂದು ನಾನು ಆಗಲೇ ಹೇಳಿದೆ. ನಾನು ಅಲ್ಲಿಗೆ ಒಂದು ಸುತ್ತು ಹೋಗಿದ್ದಾಗ ಅಲ್ಲಿನ ಬಾರಾಬಲೂತಿ ಕೆಲಸ ಮಾಡಬೇಕಾದರೆ ಬಹಳ ಕಷ್ಟ ಇದೆ, ಅದರಿಂದ ಪಂಚಾಯತಿ ಕೆಲಸ ಬೇರೆ ಮಾಡುವುವಕ್ಕಾಗುವುದಿಲ್ಲ. ನಮಗೆ ಹೆಚ್ಚು ಸಂಬಳ ಕೊಡಬೇಕು ಎಂಬುದಾಗಿ ಅಲ್ಲಿನ ಅಧಿಕಾರಿಗಳು ಕೇಳಿದ್ದಾರೆ.

Sri SANJEEVANATH AIKALA.—Is it a fact that a large number of Patels and Shanbogues have been appointed as Panchayat Secretaries without training ? In such circumstances, how can they perform their duties ?

Sri M. V. KRISHNAPPA.—The question is about new Accountants appointed by the Government to replace the old Shanbogues.

Sri SANJEEVANATH AIKALA.—In South Kanara Patels and Shanbogues have been appointed as Panchayat Secretaries and they are not trained.

Sri M. V. KRISHNAPPA.—They will get trained people very soon.

Promotions in Police Department.

*Q.—54. Sri SIDDAIAH KASHIMATH (Shirhatti).—

Will the Government be pleased to state :—

(*a*) the number of Deputy Superintendents of Police that have been promoted as Superintendents of Police in Mysore State during the last three years ;

(*b*) the basis on which the promotions were made ?

A.—Sri S. NIJALINGAPPA (Chief Minister).—

(a) 5.

(b) In accordance with the provisions of the IPS (Appointment by Promotion) Regulations.

ಶ್ರೀ ಸಿದ್ದಯ್ಯ ಕಾಶಿಮಠ್.—ಬೇರೆ ಇಲಾಖೆಗಳಲ್ಲಿ ಬಡ್ತಿ ಕೊಡುವಾಗ ಪರ್ಸಂಟೇಜನ್ನು ನಿಗದಿಮಾಡಿದ್ದೀರಿ. ಅಂದಮೇಲೆ ಈ ಪೋಲೀಸ್ ಇಲಾಖೆಯಲ್ಲಿ ಆ ರೀತಿ ಪರ್ಸಂಟೇಜನ್ನು ನಿಗದಿ ಮಾಡಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಆ ಪರ್ಸಂಟೇಜನ್ನು ಸ್ಟೇಟ್ ಪೋಲೀಸ್ ನರ್ಸಿಸ್‌ನಿಂದ ರಿಜರ್ವ್ ಮಾಡಿದೆ.

Drinking water wells in Krishnarajpet Taluk.

*Q.—64. Sri N. NANJE GOWDA (Krishnarajpet).—

Will the Government be pleased to state :—

(a) the number of Drinking water well works which have been completed out of the incomplete drinking water wells in K. R. Pet Taluk referred to in the reply given to Starred question No. 133 on 8-4-1963 ;

(b) the number of wells which were not completed but the final bills have been paid ;

(c) the number of wells that have been deepened and completed and the amount spent for the same ; (detailed information may be given) ?

A.—Sri Y. RAMACHANDRA (Deputy Minister for Municipal Administration)

(a) 7 out of 15.

(b) None.

(c) None.

ಶ್ರೀ ಎನ್. ನಂಜೇಗೌಡ.—ಹಿಂದೆ ನನ್ನ 133ನೇ ಪ್ರಶ್ನೆಗೆ ಉತ್ತರ ಕೊಡುವಾಗ ನನ್ನ ತಾಲ್ಲೂಕಿನಲ್ಲಿ 135 ಬಾವಿಗಳ ಕೆಲಸ ಇನ್‌ಕಂಪ್ಲೀಟ್ ಆಗಿದೆಯೆಂದು ಉತ್ತರ ಕೊಟ್ಟಿದ್ದಿರಿ. ಈಗಿನ ನನ್ನ ಪ್ರಶ್ನೆಗೆ ಉತ್ತರವಾಗಿ 15 ಬಾವಿಗಳ ಪೈಕಿ 7 ಬಾವಿಗಳ ಕಾಮಗಾರಿಯನ್ನು ಪೂರ್ತಿಮಾಡಲಾಗಿದೆಯೆಂದು ಹೇಳಿದ್ದೀರಿ. ಈಗ ಕೊಟ್ಟಿರುವ ಉತ್ತರವು ಸರಿಯೇ ಅಥವಾ ಹಿಂದೆ ಕೊಟ್ಟಿರುವ ಉತ್ತರ ಸರಿಯೇ ?

† ಶ್ರೀ ವೈ. ರಾಮಚಂದ್ರ.—ಈಗ ಕೊಟ್ಟಿರುವ ಉತ್ತರ ಸರಿಯಾಗಿದೆ. 15 ಕುಡಿಯುವ ನೀರಿನ ಬಾವಿಗಳ ಕೆಲಸ ಮಾತ್ರ ಉಳಿದಿದೆ. ಕೆಲಸ ಪೂರ್ತಿಯಾಗಿರುವ ಬಾವಿಗಳ ಸಂಖ್ಯೆ 7. ಇನ್ನೂ 8 ಬಾವಿಗಳ ಕೆಲಸ ಆಗಬೇಕಾಗಿದೆ.

ಶ್ರೀ ಎನ್. ನಂಜೇಗೌಡ.—ಹಿಂದೆ ಸೋಷಿಯಲ್ ವೆಲ್‌ಫೇರ್, ಮತ್ತು ಎನ್. ಇ. ಎಸ್. ಬ್ಲಾಕ್ ಇವುಗಳ ಮೂಲಕ 130 ಬಾವಿಗಳನ್ನು ಪೂರ್ತಿಮಾಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಈಗ 15 ಬಾವಿಗಳ ಕಾಮಗಾರಿ ವಿಷಯವಾಗಿ ಹೇಳುತ್ತಿದ್ದಾರೆ, ಆ 135 ಬಾವಿಗಳು ಯಾವು ಯಾವುದಕ್ಕೆ ಸೇರಿದೆ ? ಅವುಗಳ ವಿವರವೇನು ?

ಶ್ರೀ ವೈ. ರಾಮಚಂದ್ರ.—ನಾನು ಮೊದಲೇ ಹೇಳಿದ ಹಾಗೆ 15 ಕುಡಿಯುವ ನೀರಿನ ಬಾವಿಗಳ ಪೈಕಿ 7 ಬಾವಿಗಳ ಕೆಲಸ ಈಗಾಗಲೇ ಪೂರ್ತಿಯಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು.